XVI. ಶ್ರೀ ವಿ.ಸೋಮಣ್ಣ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, 1962ರ ಕರ್ನಾಟಕ ಗೃಹ ಮಂಡಳಿಯ ಅಧಿನಿಯಮ ಪ್ರಕರಣ 55(3)ರ ಮೇರೆಗೆ:

1. ಕರ್ನಾಟಕ ಗೃಹ ಮಂಡಳಿಯ 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು ಮಂಡಿಸಲಾಯಿತು.

5. ವಿಷಯ: ವಿರೋಧ ಪಕ್ಷದ ನಾಯಕರ ಜೊತೆ ಚರ್ಚಿಸಿ ಸದನಕ್ಕೆ ಹಾಜರಾಗುವಂತೆ

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಅವರು ವಿಷಯ ಪ್ರಸ್ತಾಪ ಮಾಡಿ ಹೊರಗಡೆ ಹೋಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದರಲ್ಲಿಯೂ ವಿಶೇಷವಾಗಿ ನಮ್ಮ ವಿಚಾರವಾಗಿ ತಾವು ತೆಗೆದುಕೊಂಡಂತಹ ನಿರ್ಣಯದ ವಿರುದ್ಧವಾಗಿ ಸುಪ್ರೀಂ ಕೋರ್ಟಿನಲ್ಲಿ ನ್ಯಾಯ ಪಡೆದು ಬಂದಂತಹ ವಿಚಾರವಾಗಿ ಅವರು ಪ್ರಶ್ನೆ ಎತ್ತಿದರು. ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಆ ವಿಚಾರವನ್ನು ನಿಯಮಾವಳಿ ಪ್ರಕಾರ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ ಎನ್ನುವಂತಹ ರೂಲಿಂಗ್ ಅನ್ನು ತಾವು ಕೊಟ್ಟಿದ್ದೀರಿ. ಆದರೆ ವಾಸ್ತವಾಂಶದಲ್ಲಿ ತಮ್ಮ ರೂಲಿಂಗ್ ವಿರುದ್ಧವಾಗಿ ಸುಪ್ರೀಂ ಕೋರ್ಟ್ ನಿರ್ಣಯ ಕೈಗೊಂಡಂತಹ ವಿಚಾರವನ್ನು ಪ್ರಸ್ತಾಪವೇ ಮಾಡಬಾರದು ಎನ್ನುವಂತಹ ವಿಚಾರ ಎಷ್ಟರ ಮಟ್ಟಿಗೆ ಸಮಂಜಸ ಎನ್ನುವ ಪ್ರಶ್ನೆ ಇಲ್ಲಿ ಎತ್ತಿರತಕ್ಕಂಥದ್ದು. ಒಬ್ಬ ಕಿರಿಯ ಸದಸ್ಯನಾಗಿ ನಿಯಮಾವಳಿಗಳ ಬಗ್ಗೆ ತಮಗೆ ತಿಳುವಳಿಗೆ ಕೊಡುವಂತಹ ಪ್ರಶ್ನೆ ನನ್ನಲ್ಲಿ ಇಲ್ಲ. ಆದರೆ ತಮ್ಮ ಮುಖಾಂತರ ಮುಂದಿನ ಸದನಕ್ಕೆ ಏನಾದರೂ ಒಂದು ರೂಪು ರೇಷೆಯನ್ನು ನೀಡಬೇಕಾದರೆ, ಅಥವಾ ಈ ಸದನವನ್ನು ಗೌರವಯುತವಾಗಿ ನಾವು ನಡೆಸುತ್ತಿದ್ದೇವೆ ಕೋರ್ಟುಗಳ ಅಭಿಪ್ರಾಯಕ್ಕೆ ಮಾನ್ಯತೆ ನೀಡುತ್ತಿದ್ದೇವೆ, ಎಂದರೆ ಆ ಚರ್ಚೆಗೆ ಆಸ್ಪದ ಕೊಡುವುದು ಸೂಕ್ತ. ತಮ್ಮ ಪೀಠ ಇದನ್ನು ಪರಿಗಣಿಸಬೇಕೆಂದು ನನ್ನ ಮನವಿ.

ಅಧ್ಯಕ್ಷರು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವೆಂಕರಮಣಪ್ಪ: ವಿರೋಧ ಪಕ್ಷದವರು ಹೊರಗಡೆ ಹೋದಂತಹ ಸಂದರ್ಭದಲ್ಲಿ ಚರ್ಚಿಸಿದರೆ ಹೇಗೆ?

ಅಧ್ಯಕ್ಷರು: ನಿಮ್ಮ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಟ್ಟಿದ್ದೇನೆ. ಹಾಗಾಗಿ ಮತ್ತೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ವೆಂಕಟರಮಣಪ್ಪ: ನಿಮಗೆ ಕರೆದು ಮಾತನಾಡತಕ್ಕಂತಹ ಸಂಪ್ರದಾಯವೇ ಇಲ್ಲವಲ್ಲ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಒಂದು ಮಹತ್ವದ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ. ತಾವು ದಯಮಾಡಿ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಮಂಡಿಸಿ

6. ನಿರ್ಣಯ

ವಿಷಯ: ಜೂನ್ 4–5ರ ಮಧ್ಯರಾತ್ರಿ ಬಾಬಾ ರಾಮ್‌ದೇವ್‌ವರ ಮೇಲೆ ನಡೆದಂತಹ ದಾಳಿ ಕುರಿತು.

ಶ್ರೀ ಬಿ.ಎನ್.ಬಚ್ಚೇಗೌಡ(ಕಾರ್ಮಿಕ ಮತ್ತು ರೇಷ್ಮೆ ಸಚಿವರು):– ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ದೇಶದ ಮಹಾನ್ ಪಿಡುಗಾಗಿರುವ ಭ್ರಷ್ಟಾಚಾರದ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಚಳವಳಿ ನಡೆಸುತ್ತಿದ್ದ ಬಾಬಾ ರಾಮ್‌ದೇವ್‌ರನ್ನು ಜೂನ್ 4–5 ರ ಮಧ್ಯರಾತ್ರಿಯಲ್ಲಿ ನಡೆಸಿದ ಪೊಲೀಸ್ ಕಾರ್ಯಾಚರಣೆಯ ಮೂಲಕ ಬಂಧಿಸಿರುವುದು ಹೇಯಕೃತ್ಯ. ಈ ಬಂಧನ ಒಬ್ಬ ಹೋರಾಟಗಾರನಿಗೆ ಮಾಡಿದ ಅಪಚಾರ ಮಾತ್ರವಲ್ಲ, ಬದಲಿಗೆ ಭ್ರಷ್ಟಾಚಾರದ ವಿರುದ್ಧ ಧ್ವನಿಯೆತ್ತಿರುವ ಹಾಗೂ ತನ್ಮೂಲಕ ದೇಶದ ವ್ಯವಸ್ಥೆಗೆ ಒಂದು ಹೊಸ ಆರೋಗ್ಯಕರ ದಿಕ್ಕು ತೋರಿಸುವ ನಿಟ್ಟಿನಲ್ಲಿ ಸಿಡಿದೆದ್ದಿರುವ ಪ್ರಜಾಶಕ್ತಿಯ ಮೇಲೆ ಮಾಡಿರುವ ಒಂದು ಆಕ್ರಮಣ.

ಬ್ರಿಟಿಷರ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಹೋರಾಟ ಮಾಡಿ ಸ್ವಾತಂತ್ರ್ಯ ತಂದುಕೊಂಡ ಈ ದೇಶದಲ್ಲಿ ಅಹಿಂಸಾ ಹೋರಾಟವನ್ನು ಮಧ್ಯರಾತ್ರಿಯಲ್ಲಿ ದಮನಗೊಳಿಸಿರುವ ಸನ್ನಿವೇಶ ಬಂದೊದಗಿರುವುದು ಅತ್ಯಂತ ವಿಪರ್ಯಾಸ. ಈ ಸನ್ನಿವೇಶವು ನಾಗರೀಕ ಮೂಲ ಹಕ್ಕುಗಳನ್ನು ಅಪಹರಿಸಿದ ತುರ್ತು ಪರಿಸ್ಥಿತಿಯ ಸಂದರ್ಭವನ್ನು ನೆನಪಿಗೆ ತರುತ್ತದೆ.